

# ಒಣ ಹುಲ್ಲಿನ ಫುಟ್ಬಾಲ್ ಕ್ರೀಡಾಂಗಣ

ಆತ ರಷ್ಯಾದ ರೈತ ರೋಮನ್ ಪೊನೊಮರೆವ್. 2018ರ ಫಿಫಾ ವಿಶ್ವ ಕಪ್ ಫುಟ್ಬಾಲ್ ಪಂದ್ಯಗಳು ನಡೆಯಲಿರುವ ತನ್ನ ದೇಶದಲ್ಲಿ ಅದರ ತಯಾರಿಗಾಗಿ ಮಾಡುತ್ತಿರುವ ವೆಚ್ಚದ ಕುರಿತು ಕೋಪಗೊಂಡ. ಅದರಲ್ಲೂ ಪಂದ್ಯಗಳು ನಡೆಯಲಿರುವ ಸೇಂಟ್ ಪೀಟರ್ಸ್‌ಬರ್ಗ್‌ನ ಝೆನಿತ್ ಅರಿನಾ ನಿರ್ಮಾಣದಲ್ಲಾದ ವಿಳಂಬ, ಅಗಾಧ ಖರ್ಚು, ಭ್ರಷ್ಟಾಚಾರದ ಕುರಿತು ಅಸಮಾಧಾನಗೊಂಡಿದ್ದ ಆತ ತನ್ನದೇ ಆದ ಫುಟ್ಬಾಲ್ ಕ್ರೀಡಾಂಗಣ ನಿರ್ಮಾಣ ಶುರು ಮಾಡಿಯೇ ಬಿಟ್ಟ. ಆಗ ನಿರ್ಮಾಣಗೊಂಡಿದ್ದೇ ಒಣ ಹುಲ್ಲಿನ ಕ್ರೀಡಾಂಗಣ.

ಒಟ್ಟು 4,500 ಅಂಡಿಗೆ ಹುಲ್ಲನ್ನು ಬಳಸಿ ಐದೇ ದಿನಗಳಲ್ಲಿ ಝೆನಿತ್ ಕ್ರೀಡಾಂಗಣದ ಪಡಿಯಚ್ಚಿನಂತಿರುವ ಈ ಕ್ರೀಡಾಂಗಣವನ್ನು ಸ್ಟಾವ್ರೊಪೋಲ್ ಪ್ರದೇಶದಲ್ಲಿ ನಿರ್ಮಿಸಿದ್ದಾನೆ 34 ವರ್ಷ ವಯಸ್ಸಿನ ಪೊನೊಮರೆವ್. ಇತರ 4–5 ಮಂದಿ ರೈತರೂ ಇದಕ್ಕೆ ಕೈ ಜೋಡಿಸಿದ್ದಾರಂತೆ. ಇದರಲ್ಲಿ ಒಟ್ಟು 300 ಮಂದಿ ಕುಳಿತು ಫುಟ್ಬಾಲ್ ಪಂದ್ಯವನ್ನು ಆರಾಮವಾಗಿ ವೀಕ್ಷಿಸಬಹುದು. ಇದಕ್ಕೆ ತಗಲಿದ ವೆಚ್ಚ 673 ಡಾಲರ್ (ಅಂದಾಜು 43 ಸಾವಿರ ರೂಪಾಯಿ). ಈಗಾಗಲೇ 'ಹುಲ್ಲಿನ ಫುಟ್ಬಾಲ್ ವಿಶ್ವ ಕಪ್'ನ ಪಂದ್ಯಾವಳಿಗಳು ಈ ಹುಲ್ಲಿನ ಕ್ರೀಡಾಂಗಣದಲ್ಲಿ ನಡೆದಿವೆ.

720 ದಶಲಕ್ಷ ಡಾಲ್ ವೆಚ್ಚದ ಝೆನಿತ್ ಕ್ರೀಡಾಂಗಣ ನಿರ್ಮಾಣದಲ್ಲಿ ಅಲ್ಲಿಯ ಸರ್ಕಾರಕ್ಕಾದ ಮುಖಭಂಗವನ್ನು ಅಣಕಿಸಲೆಂದೇ ಈ ಹುಲ್ಲಿನ ಕ್ರೀಡಾಂಗಣ ನಿರ್ಮಿಸಿದ್ದು ಎನ್ನುವ ಪೊನೊಮರೆವ್, ತನ್ನ ತೋಟದಲ್ಲಿ ಉಷ್ಟ್ರ ಪಕ್ಷಿಗಳನ್ನು ಸಾಕುವುದಲ್ಲದೇ, 25 ಬಗೆಯ ವಿಚಿತ್ರ ಆಕಾರದ ಕಲ್ಲಂಗಡಿ ಹಣ್ಣುಗಳನ್ನು ಬೆಳೆಯುವುದರಲ್ಲಿ ನಿಸ್ಸೀಮ. ರೈತನ ಈ ಅಣಕನ್ನು ಲಘುವಾಗಿ ತೆಗೆದುಕೊಂಡಿರುವ ಅಧಿಕಾರಿಗಳು ಕ್ಲಬ್ ಫುಟ್ಬಾಲ್ ಪಂದ್ಯದ ಪಾಸ್ ಅನ್ನು ಪೊನೊಮರೆವ್‌ಗೆ ಕಳಿಸಿ ಮತ್ತಷ್ಟು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರಂತೆ.




■ ಎಸ್. ಹೆಗಡೆ